# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಹೂಡಿ ಉಪವಿಭಾಗ, ಬೆಂಗಳೂರು-48.**

ಸಂ:ಬಿಬಿಎಂಪಿ/ಸಕಾಅ/ಹೂಉವಿ/ /2022-23 ದಿನಾಂಕ:25.10.2022

**-:ದಿನಾಂಕ:25.10.2022 ರಂದು ನಡೆದ 54-ಹೂಡಿ ವಾರ್ಡ್ ಸಮಿತಿಯ ಸಭೆಯ ನಡುವಳಿಗಳು:-**

ಮಾನ್ಯ ಆಯುಕ್ತರವರ ಆದೇಶದ ದಿನಾಂಕ:21-09-2020ರ ಮೇರೆಗೆ ವಾರ್ಡ್ ಸಮಿತಿಯನ್ನು ರಚಿಸಲಾಗಿದ್ದು, ದಿನಾಂಕ:25.10.2022 ರ ಮಂಗಳವಾರ ಬೆಳಗ್ಗೆ 11.00 ಕ್ಕೆ ವಾರ್ಡ್ ನಂ.105 ಬೆಳತ್ತೂರು ಮತ್ತು ವಾರ್ಡ್ ನಂ.106 ಹೂಡಿ, ಹೂಡಿ ಕಾಮಗಾರಿ ಕಛೇರಿಯಲ್ಲಿ ವಾರ್ಡ್ ಮಟ್ಟದ ಸಮಿತಿಯ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಸಭೆಯ ಅಧ್ಯಕ್ಷರಾದ ನೋಡಲ್ ಅಧಿಕಾರಿಗಳೂ ಸಭೆಯನ್ನು ಪ್ರಾರಂಭಿಸಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸ್ಥಳೀಯ ಸಂಘ ಸಂಸ್ಥೆಯವರಿಗೆ ಸ್ವಾಗತ ಕೋರಿದ್ದು, ಸಭೆಯನ್ನು ಪ್ರಾರಂಭಿಸಿದರು.

**ಸಭೆಗೆ ಹಾಜರಿದ್ದವರು:-**

| ಕ್ರ.ಸಂ | ಹಾಜರಿದ್ದವರ ಹೆಸರು | ಪದನಾಮ ಅಥವಾ ಇಲಾಖೆ | ಹಾಜರಾತಿ |
|---|---|---|---|
| 1 | ಶ್ರೀ.ಶ್ರೀನಿವಾಸ್ ಮೂರ್ತಿ. | ಅಧ್ಯಕ್ಷರು ವಾರ್ಡ್ ನೋಡಲ್ ಅಧಿಕಾರಿಗಳು ಹಾಗೂ ಸ.ಕಾ.ಅ. ಹೂಡಿ ಉಪವಿಭಾಗ | ಹಾಜರಿದ್ದರು. |
| 2 | ಶ್ರೀ.ಎಂ.ಜಗದೀಶ್ | ಕಾರ್ಯದರ್ಶಿಗಳು ವಾರ್ಡ್ ಎ.ಇ. ವಾರ್ಡ್.ನಂ-(54) 105 & 106 | ಹಾಜರಿದ್ದರು. |
| 3 | ಶ್ರೀ.ಶ್ರೀನಿವಾಸಯ್ಯ | ಪಿ.ಎಸ್.ಐ. ಕೆ.ಆರ್.ಪುರಂ | ಹಾಜರಿದ್ದರು. |
| 4 | ಶ್ರೀ.ರವಿ | ಎಇ. ಬಿ.ಡಬ್ಲ್ಯೂ.ಎಸ್,ಎಸ್.ಬಿ | ಹಾಜರಿದ್ದರು. |
| 5 | ಶ್ರೀ.ಪ್ರಸಾದ್ .ಎಂ (ಬಿಟಿಬಿ) | ಸಾದರಮಂಗಳ | ಹಾಜರಿದ್ದರು. |
| 6 | ಶ್ರೀ.ಮಹೇಂದ್ರ ಪ್ರಸಾದ್ | ಕೊಡಿಗೇಹಳ್ಳಿ | ಹಾಜರಿದ್ದರು. |
| 7 | ಶ್ರೀ. ಲೋಕೇಶ್ ರೆಡ್ಡಿ | ಸಾದರಮಂಗಳ | ಹಾಜರಿದ್ದರು. |
| 8 | ಶ್ರೀ.ದಿನೇಶ್ | ಸಾದರಮಂಗಳ | |
| 9 | ಶ್ರೀಮತಿ.ರೂಪ.ಕೆ.ಪಿ | CRP Hoodi ಶಿಕ್ಷಣ ಇಲಾಖೆ | ಹಾಜರಿದ್ದರು. |
| 10 | ಶ್ರೀಮತಿ.ಅರುಣಾ ರೆಡ್ಡಿ | ಬಸವಣ್ಣ ನಗರ | ಹಾಜರಿದ್ದರು. |
| 11 | ಶ್ರೀ.ಶರಣಕುಮಾರ್ | ಭೈರತಿ | ಹಾಜರಿದ್ದರು. |
| 12 | ಶ್ರೀಮತಿ. ಲತಾ | ಕಲ್ಯಾಣ ಇಲಾಖೆ ಮಹದೇವಪುರ | ಹಾಜರಿದ್ದರು. |
| 13 | ಶ್ರೀ. ರಾಮಕೃಷ್ಣ | ಬೆಳತ್ತೂರು | ಹಾಜರಿದ್ದರು. |
| 14 | ಶ್ರೀ.ವೆಂಕಟೇಶ್ | ಭೈರತಿ | ಹಾಜರಿದ್ದರು. |
| 15 | ಚಂದ್ರಶೇಖರ್ | ಸಾರ್ವಜನಿಕರು | |

Scanned with CamScanner

**ಸಭೆಯ ನಡುವಳಿಗಳು:-**

- ವಾರ್ಡ್ ಸಮಿತಿ ಕಾರ್ಯದರ್ಶಿ ಹಾಗೂ ಸಹಾಯಕ ಅಭಿಯಂತರರು ವಾರ್ಡ್ ನಂ-54 ರವರು ಸಭೆಗೆ ಬಂದಿರುವ ವಾರ್ಡ್ ಸದಸ್ಯರಿಗೆ, ಅಧಿಕಾರಿ/ನೌಕರರುಗಳಿಗೆ ಸ್ವಾಗತಾ ಕೋರಿಸಭೆ ನಡೆಸಿಕೊಡುವಂತೆ ಕೋರಿದರು.
- ಅಧ್ಯಕ್ಷರು ಈ ಹಿಂದೆ ನಡೆದ ವಾರ್ಡ್ ಸಮಿತಿ ಸಭೆಯಲ್ಲಿ ತಿರ್ಮಾನಗಳನ್ನು ಕೈಗೊಂಡಿರುವ ಬಗ್ಗೆ ಅಧಿಕಾರಿ/ನೌಕರರು ಚರ್ಚಿಸಲಾಯಿತ್ತು ಹಾಗೂ ಕ್ರಮವಹಿಸಲು ಸೂಚಿಸಲಾಯಿತ್ತು.
- ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು ಹಾಗೂಮುಂದಿನ ಸಭೆಯಲ್ಲಿ ಗೈರುಹಾಜರಾದಲ್ಲಿ ಮೇಲಾಧಿಕಾರಿಗಳಿಗೆ ಶಿಫಾರಸ್ಸು ಮಾಡಲಾಗುವುದು ಎಂದು ತಿಳಿಸಿದರು.

**ಕಾಮಗಾರಿ ಇಲಾಖೆ**

1) ಕೊಡಿಗೇಹಳ್ಳಿ ಪ್ರಸಾದ್ ನವರು ಕೊಡಿಗೇಹಳ್ಳಿ ಯಿಂದ ಅಯ್ಯಪ್ಪನಗರ ಮುಖ್ಯ ರಸ್ತೆಯಲ್ಲಿ ಗುಂಡಿ ಅಗದಿರುತ್ತದೆ ಆದ್ದರಿಂದ ಗುಂಡಿಗಳನ್ನು ಮುಚ್ಚಬೇಕೆಂದು ಸಭೆಯಲ್ಲಿ ತಿಳಿಸಿದರು.
(ಕ್ರಮ.ಸುರೇಶ್ ಆರ್.ಐ)
2) ಬಿಬಿಎಂಪಿ ಪಾರ್ಕ್‌ಗಳಲ್ಲಿ ನಾಮಫಲಕಗಳನ್ನು ಅಳವಡಿಸಲು ಕೋರಿದರು.
(articulare report)
3) ಚರಂಡಿಗಳಿಗೆ ಸ್ಲಾಬ್ ಹಾಕಿರುವುದಲ್ಲ ಅವುಗಳಿಗೆ ಸ್ಲಾಬ್ಸ್ ಹಾಕಿಸಲು ಕೋರಿರುತ್ತಾರೆ.
(ವಾರ್ಡ್ ಇಂಜನೀಯರ್ಸ್)
4) ದೀಯಾ ಶಾಲೆ ಹತ್ತಿರ Culvert ಅಳವಡಿಸಲು ಕೊಡಿಗೇಹಳ್ಳಿ ಪ್ರಸಾದ್‌ರವರು ಸಭೆಯಲ್ಲಿ ತಿಳಿಸಿದರು. (ಕ್ರಮ.ಎಸ್.ಡಬ್ಲ್ಯೂಡಿ, ರಾಘವೇಂದ್ರ ಎಇಇ)
5) ರಸ್ತೆಗಳಲ್ಲಿ ಮಳೆಯಿಂದ ಗುಂಡಿ ಬಿದ್ದಿರುತ್ತದೆ ಅದನ್ನು ಮುಚ್ಚಲು ಸಭೆಯಲ್ಲಿ ತಿಳಿಸಿದರು. (ಕ್ರಮ ವಾರ್ಡ್ ಇಂಜನೀಯರ್ಸ್ ಮತ್ತು ಆರ್‌ಐ ಇಂಜನೀಯರ್ಸ್)

**ಬಿ.ಡಬ್ಲ್ಯೂ.ಎಸ್,ಎಸ್.ಬಿ(BWSSB):-**

1) ಕೊಡಿಗೇಹಳ್ಳಿಯಲ್ಲಿ ಹೊಸ ಹೊಸ ಪೈಪ್ ಲೈನ್ ಅಳವಡಿಸಲು ಕೆ.ಡಿ.ವೆಂಕಟೇಶ್ ರವರ ಮನೆಯಿಂದ ಸತೀಶ್ ಮನೆಯವರೆಗೆ ಕೋರಿದರು. ( ಕ್ರಮ. ಆನಂದ ಎಇಇ)
2) ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ವಾರಣಾಶಿಯಲ್ಲಿ ಹೊಸ ಪೈಪ್‌ಲೈನ್‌ಗಳನ್ನು ಅಳವಡಿಸುವ ಬಗ್ಗೆ ಕೋರಿದರು. ( ಕ್ರಮ. ಆನಂದ ಎಇಇ)

**ಬೀದಿ ದೀಪ ಹಾಗೂ ವಿದ್ಯುತ್**

1) ಚಂದ್ರಶೇಖರ್ ರವರು ಅಯ್ಯಪ್ಪನಗರ ಮುಖ್ಯ ರಸ್ತೆಯಲ್ಲಿ ಬೀದಿ ದೀಪಗಳನ್ನು ಅಳವಡಿಸಬೇಕೆಂದು ಸಭೆಯಲ್ಲಿ ತಿಳಿಸಿದರು. (ಕ್ರಮ. ಶರತ್ ಕುಮಾರ್ ಇಇ ವಿದ್ಯುತ್)

Scanned with CamScanner

**ಕೋವಿಡ್-19 ಸಾಂಕ್ರಾಮಿಕ ರೋಗದ ಬಗ್ಗೆ:-**

ಮುಂಜಾಗ್ರತಾ ಕ್ರಮವಾಗಿ ಸಭೆ ಸಮಾರಂಬ ಮಾಡದಂತೆ ತಿಳಿಸಲಾಯಿತ್ತು ಹಾಗೂ ವ್ಯಾಕ್ಸಿನ್‌ನೇಶನ್ ಹಾಕಿಸಲು ಸ್ಥಳಿಯರಿಗೆ ಮುಂಜಾಗ್ರತೆ ವಹಿಸಿ ಕ್ರಮಕೈಗೊಳ್ಳಲು ತಿಳಿಸಿದರು.

Covid-19, ವ್ಯಾಕ್ಸಿನೇಷನ್, Contact Tracing ಮತ್ತು Testing ಮಾಡುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು.

ಸಭೆಗೆ ಹಾಜರಾಗದ ಅಧಿಕಾರಿಗಳಿಗೆ ಮುಂದಿನ ಸಭೆಗಳಿಗೆ ತಪ್ಪದೇ ಹಾಜರಾಗಲು ಸೂಚಿಸಲಾಯಿತು. ಸಮಿತಿ ಸಭೆಗೆ ಆಗಮಿಸಿದ ಎಲ್ಲಾ ಅಧಿಕಾರಿಗಳಿಗೂ ಹಾಗೂ ಸಂಘ ಸಂಸ್ಥೆಯ ಸದಸ್ಯರಿಗೂ ನೋಡಲ್ ಅಧಿಕಾರಿಗಳಿಗೂ ವಂದಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ವಾರ್ಡ್ ಸಮಿತಿ ನೋಡಲ್ ಅಧಿಕಾರಿ ಹಾಗೂ
ಸ.ಕಾ.ಅ. ಹೂಡಿ ಉಪವಿಭಾಗ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

ವಾರ್ಡ್ ಸಮಿತಿ ಕಾರ್ಯದರ್ಶಿ
ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ-105 ಹೂಡಿ * 105
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಮಹದೇವಪುರ ವಲಯ

Scanned with CamScanner